ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/08/ಇಪಿಎಸ್/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777

ದಿನಾಂಕ: 26.12.2023

**ಜ್ಞಾಪನ**

ವಿಷಯ: ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಮತ್ತು ಪ್ರಾಯೋಗಿಕ ಪರೀಕ್ಷಾ ಕಾರ್ಯ ನಿರ್ವಹಿಸಿರುವ ಆಂತರಿಕ ಅಂಕಗಳ ಪರಿವೀಕ್ಷಕರು, ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು & ಮುಖ್ಯ ವೀಕ್ಷಕರ ಹಾಜರಾತಿ ನಿರ್ವಹಣೆ ಕುರಿತು.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 08/ಇಪಿಎಸ್ 2023 ದಿನಾಂಕ:20.12.2023

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಮತ್ತು ಪ್ರಾಯೋಗಿಕ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಿಗೆ ಆಂತರಿಕ ಅಂಕಗಳ ಪರಿವೀಕ್ಷಕರು, ಬಾಹ್ಯ ಪ್ರಾಯೋಗಿಕ ಪರೀಕ್ಷಕರು, ಮುಖ್ಯ ಅಧೀಕ್ಷಕರು (ಪ್ರಾಯೋಗಿಕ), ಮುಖ್ಯ ಅಧೀಕ್ಷಕರು (ಥಿಯರಿ), ಉಪ ಮುಖ್ಯ ಅಧೀಕ್ಷಕರು & ಮುಖ್ಯ ವೀಕ್ಷಕರುಗಳನ್ನು ನಿಯೋಜಿಸಲಾಗಿತ್ತು.

ಸಂಬಂಧಪಟ್ಟ ಪ್ರಿನ್ಸಿಪಾಲರು/ ಮುಖ್ಯ ಅಧೀಕ್ಷಕರು ಮೇಲ್ಕಂಡ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ ಕಾರಣ **"ಹಾಜರಾತಿ ಪ್ರಮಾಣಪತ್ರ"** ವನ್ನು ನಿಗದಿತ ವಹಿಯಲ್ಲಿನ (ಆರ್.ಆರ್. ಸಂಖ್ಯೆಯುಳ್ಳ ಹಾಜರಾತಿ ಪುಸ್ತಕ) ಡಿಸೆಂಬರ್ 2023 ರ ಪರೀಕ್ಷೆಗೆ ಸಂಬಂಧಿಸಿದಂತೆ ವಿವರಗಳನ್ನು ಪರಿಶೀಲಿಸಿ ಹಾಜರಾತಿ ಪ್ರಮಾಣ ಪತ್ರವನ್ನು ನೀಡಬೇಕಾಗಿರುತ್ತದೆ. ಸದರಿ ಹಾಜರಾತಿ ಪ್ರಮಾಣ ಪತ್ರದಲ್ಲಿ ಪರೀಕ್ಷಾ ದಿನಾಂಕ/ಸಮಯಗಳನ್ನು ಅನ್ವಯವಾಗುವ ರೀತಿ ನಮೂದಿಸಬೇಕಾಗಿರುತ್ತದೆ.

ವಿಚಕ್ಷಣಾ ಅಧಿಕಾರಿಗಳು ಪಾಲಿಟೆಕ್ನಿಕ್/ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪರೀಕ್ಷಾ ಕಾರ್ಯಗಳ ಬಗೆಗಿನ ಹಾಜರಾತಿ ವಹಿಯನ್ನು ಮತ್ತು ಹಾಜರಾತಿ ಪ್ರಮಾಣ ಪತ್ರಗಳ ಕಛೇರಿ ಪ್ರತಿಗಳನ್ನೂ ಸಹ ಪರಿಶೀಲಿಸಲು ತಿಳಿಸಲಾಗಿದೆ. ಸದರಿ ಹಾಜರಾತಿ ವಹಿ ಪರಿಶೀಲನೆ ವೇಳೆ ಯಾವುದೇ ಲೋಪಗಳು ಕಂಡುಬಂದಲ್ಲಿ/ ಹಾಜರಾಗಿ ವಹಿಯಲ್ಲಿನ ವಿವರಗಳು ಅಸಮಂಜಸವಾಗಿದ್ದರೆ, ಕೂಡಲೇ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳ ಇವರಿಗೆ ವರದಿ ಮಾಡಲು ಸೂಚಿಸಲಾಗಿದೆ.

ಪ್ರಯುಕ್ತ ಈ ವಿಷಯದ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಎಲ್ಲಾ ಜಿಲ್ಲಾವಾರು ವಿಚಕ್ಷಣ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ಎಲ್ಲಾ ಜಿಲ್ಲೆಗಳ ವಿಚಕ್ಷಣ ಅಧಿಕಾರಿಗಳಿಗೆ- ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು/ ಮುಖ್ಯ ಅಧೀಕ್ಷರು - ಮಾಹಿತಿ & ಸೂಕ್ತ ಕ್ರಮಕ್ಕಾಗಿ
2. ನಿರ್ದೇಶಕರ ಆಪ್ತ ಶಾಖೆ
3. ಇ-ಆಡಳಿತ -ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಗಣಕ ಕೇಂದ್ರ -ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು